ಶ್ರೀ ಎಂ. ಎಸ್. ಕೃಷ್ಣನ್.—ಆ ಪ್ರದೇಶದಲ್ಲಿ ಸುಮಾರು ಮುಕ್ಕಾಲುಪಾಲು ಪ್ರದೇಶದಲ್ಲಿ ಸಾಮಾನ್ಯ ಜನರೂ ಮತ್ತು ಕಾರ್ಮಿಕರೂ ವಾಸಮಾಡುತ್ತಿರುವುದರಿಂದ ಅವರಿಗೆ ಟ್ಯಾಕ್ಸನ್ನು ಕೊಡುವುದಕ್ಕೆ ಬಹಳ ಕಷ್ಟವಾಗಿರುವುದರಿಂದ ಅದನ್ನು ಅಲ್ಲಿ ವಸೂಲ್ಮಾಡಲು ಯಾವ ಒಂದು ಏಜನ್ಸಿಯೂ ಇಲ್ಲ ಎಂಬುದು ನಜವಿರಿಗೆ ಗೊತ್ತಿಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಟ್ರಸ್ಟ್ ಬೋರ್ಡಿನವರು ಕಲೆಕ್ಟ್ ಮಾಡುತ್ತಿದ್ದಾರೆ. ಆ ಕೆಲಸವನ್ನು ಅವರಿಗೆ ಒಪ್ಪಿಸಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಎಷ್ಟು ಹಣ ಬಾಕಿ ಬಿದ್ದಿದೆ.

ಶ್ರೀ ಬಿ. ಎಂ. ಪಾಟೀಲ್.—11,76,520 ರೂಪಾಯಿಗಳು ಬಾಕಿ ನಿಂತಿದೆ.

ಶ್ರೀ ಟಿ. ಆರ್. ಶಾಮಣ್ಣ.—ಟ್ರಸ್ಟ್‌ಬೋರ್ಡಿನವರು ತಾವು ಮಾಡಬೇಕಾದ ಮತ್ತು ಒದಗಿಸಬೇಕಾದ ಸೌಕರ್ಯಗಳನ್ನು ಒದಗಿಸದೆ ಇದ್ದಂಥ ಪ್ರದೇಶಗಳನ್ನು ಕಾರ್ಪೊರೇಷನ್ ಆಡಳಿತಕ್ಕೆ ಸೇರಿಸಿದ್ದರಿಂದ ಈಗಾಗಲೆ ಅಲ್ಲಿಗೆ ನಲ್ಲಿ, ನೀರು ದೀಪ ಡ್ರೈನೇಜ್ ಮತ್ತು ರಸ್ತೆಗಳನ್ನು ಒದಗಿಸಲು ಕಾರ್ಪೊರೇಷನ್‌ಗೆ ಸುಮಾರು ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳ ಖರ್ಚುಬೀಳುವುದು ನಷ್ಟ ಹೆಚ್ಚಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಇದನ್ನು ತಡೆಗಟ್ಟುವುದಕ್ಕೇನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಬಿ. ಎಂ. ಪಾಟೀಲ್.—ಈಗ ಆ ಅನುಕೂಲಗಳನ್ನೆಲ್ಲಾ ಒದಗಿಸಿದ ನಂತರವೇ ಆ ಬಡಾವಣೆಗಳನ್ನು ಕಾರ್ಪೊರೇಷನ್ನಿಗೆ ವರ್ಗಾಯಿಸಬೇಕೆಂದು ತಿಳಿಸಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಹಾಲಿ ತಡವಾಗಿರತಕ್ಕ ಕಡೆಗಳಲ್ಲಿ ಇನ್ನೆಷ್ಟು ದಿನಗಳಲ್ಲಿ ಮಾಡುವಂತೆ ತಿಳಿಸುತ್ತೀರಿ ?

ಶ್ರೀ ಬಿ. ಎಂ. ಪಾಟೀಲ್.—ಸಾಧ್ಯವಾದಷ್ಟು ಬೇಗ ಮಾಡುವಂತೆ ಸೂಚನೆಗಳನ್ನು ಕೊಡಲಾಗಿದೆ.

ಶ್ರೀ ಎಸ್. ಎಸ್ ಅರಕೇರಿ.—ಸೊಣ್ಣೇನಹಳ್ಳಿ ಬಡಾವಣೆಯಲ್ಲಿ ನೀರಿಲ್ಲ, ದೀಪವಿಲ್ಲ, ಕಾರ್ಪೊರೇಷನ್ ಅವರನ್ನು ಕೇಳಿದರೆ ಟ್ರಸ್ಟ್‌ಬೋರ್ಡಿನವರು ಆ ಬಗ್ಗೆ ನಮ್ಮಲ್ಲಿ ಹಣವನ್ನು ಡೆಪಾಜಿಟ್ ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಈ ಎರಡೂ ಏಟಂಗಳಿಗೆ ಎಲೆಕ್ಟ್ರಿಸಿಟಿ ಬೋರ್ಡ್ ಮತ್ತು ವಾಟರ್ ಬೋರ್ಡ್‌ಗಳಿಗೆ ಟ್ಯಾಕ್ಸಿನ ಎಷ್ಟು ಪರ್ಸೆಂಟ್ ಹಣವನ್ನು ಕಟ್ಟಬೇಕು ?

ಶ್ರೀ ಬಿ. ಎಂ. ಪಾಟೀಲ್.—ಹಾಲಿ ಜಾರಿಯಲ್ಲಿರತಕ್ಕ ವಿಧಿಗಳ ಪ್ರಕಾರ 15 ಪರ್ಸೆಂಟ್ ತೆಗೆದುಕೊಳ್ಳುತ್ತಿದ್ದರು. ಆದರೆ ಇನ್ನೂ ನೀರು ದೀಪಗಳನ್ನು ಹಾಕದೆ ಇರುವ ಕಡೆ 9 ಪರ್ಸೆಂಟ್‌ಗೆ ಅದನ್ನು ಇಳಿಸಲಾಗಿದೆ. ಆದರೆ ಜನರಿಂದ ಏನು ಒಂದು ಟ್ಯಾಕ್ಸನ್ನು ವಸೂಲ್ಮಾಡಲಾಗುತ್ತಿದೆ ಅದಕ್ಕೂ ಹೆಚ್ಚಿನ ಹಣವನ್ನು ಖರ್ಚುಮಾಡಿದೆ.

Mr. SPEAKER.—Next Question.

Sri M. S. KRISHNAN.—This is a very important issue. I have not asked even one supplementary about the water issue. Please permit me.

Mr. SPEAKER.—I have already called the next Question. There are many other questions also to be covered.

(*The Member withdrew*)

Collection of Rs. 10 from Sugarcane Suppliers

351. **Sri B. P. GANGADHAR** (Tumkur).—

Will the Minister for Development be pleased to state:—

(*a*) whether there are any rules framed either by the State Government or Central Government to collect share amount of Rs. 10 compulsorily from the sugarcane suppliers to the factories;

(SRI B. P. GANGADHAR)

(*b*) whether it is not a fact that the Gauribidanur Sahakara Sangha Sugar Factory authorities have been compulsorily collecting the said amount of Rs. 10 from the sugarcane suppliers;

(*c*) whether there is any minimum or maximum limit fixed to collect the same (share amount);

(*d*) whether it is not a fact that Ryots have been put to great hardship by the method now adopted by the Factory authorities;

(*e*) the controlling powers of the State Government over the Factory;

(*f*) whether the Government has any proposal to direct the Factory authorities not to collect the said amount of Rs. 10 from the cane suppliers?

Sri B. L. GOWDA (Deputy Minister for Co-operation).—

(*a*) No.

(*b*) Yes.

(*c*) So far as collection of Rs. 10 is concerned no maximum or minimum is fixed. But, for collection of share capital of the Society a minimum of Rs. 100 and a maximum of Rs. 10,000 from individual members is stipulated under byelaws of the Society.

(*d*) No.

(*e*) The control over the business of the factory vests with Government under Section 54 read with Section 121 of M.C.S. Act.

(*f*) No.

ಶ್ರೀ ಬಿ. ಪಿ. ಗಂಗಾಧರ್.—ಈಗ ಆ ಕಾರ್ಖಾನೆಯಲ್ಲಿ ದಿನಕ್ಕೆಷ್ಟು ಕಬ್ಬನ್ನು ಕ್ರಷ್ ಮಾಡಲಾಗುತ್ತಿದೆ ಮತ್ತು ಹಣ್ಣು ರೂಪಾಯಿಗಳನ್ನು ಎಂಎನಿಂದ ವಸೂಲ್ಮಾಡಲಾಗುತ್ತಿದೆ?

ಶ್ರೀ ಬಿ. ಎಲ್. ಗೌಡ.—ದಿನಕ್ಕೆ 1200 ಟನ್ ಕ್ರಷ್ ಮಾಡಲಾಗುತ್ತಿದೆ.

Sri M. S. KRISHNAN.—We have nothing to do with other questions. It is very unfair on your part not to have permitted us to put supplementaries.

Mr. SPEAKER.—Hon. Member may please resume his seat.

Sri M. S. KRISHNAN.—I am sorry. What type of Speaker you are, Sir?

Mr. SPEAKER.—Hon. Member should withdraw that remark.

Sri M. S. KRISHNAN.—That is a different matter. Permit me to put my supplementary.

Mr. SPEAKER.—Is the hon. Member going to withdraw his remark or not? I will not permit any further discussion.

Sri M. S. KRISHNAN.—Sir, if it has hurt your feelings, I am prepared to withdraw. Please permit me to put a supplementary.

Mr. SPEAKER.—I request the hon. member to resume his seat.

Sri M. S. KRISHNAN.—I stronlgy object to the gross injustice the Chair is doing against me and as a protest I walk out.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಗೌರಿಬಿದನೂರು ನಕ್ಕರೆ ಕಾರ್ಖಾನೆಗೆ ರೈತರು ಎಷ್ಟು ದಿನಗಳಿಂದ ಕಬ್ಬನ್ನು ಸರಬರಾಯಿ ಮಾಡುತ್ತಿದ್ದಾರೆ, ಮತ್ತು ಅವರಿಂದ ಆ ಹಕ್ಕು ಪರ್ಸೆಂಟ್ ಹಣವನ್ನು ಎಷ್ಟು ದಿನಗಳಿಂದ ಕಲೆಕ್ಟ್ ಮಾಡುತ್ತಿದ್ದೀರಿ ಎಷ್ಟು ಹಣ ವಸೂಲಾಗಿದೆ ?

†ಶ್ರೀ ಬಿ ಎಲ್. ಗೌಡ.—ನೋಟೀಸ್.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹಾಗೆ ಷೇರಿಗೆ ಹತ್ತು ರೂಪಾಯಿಗಳನ್ನು ವಸೂಲ್ಮಾಡಬೇಕು ಎಂಬುದಾಗಿ ಬೈಲಾದಲ್ಲಿ ಹೇಳಿದೆಯೇ ?

ಶ್ರೀ ಬಿ. ಎಲ್. ಗೌಡ.—ಬೈಲಾ ನಂಬರ್ 36 ರಲ್ಲಿ ಬೋರ್ಡಿನವರು ಸೊಸೈಟಿಯ ಕಲ್ಯಾಣಕ್ಕೆ ರೆಸಲ್ಯೂಷನ್ ಮಾಡಿ ವಸೂಲ್ಮಾಡಬಹುದೆಂದು ಹೇಳಿದೆ. ಆ ಹತ್ತು ರೂಪಾಯಿಗಳಲ್ಲಿ ಮೂರುವರೆ ನಾನ್‌ರಿಫಂಡಬರ್ ಮೊಬಲಗು ಇನ್ನುಳಿದ ಆರೂವರೆ ರೂಪಾಯಿಗಳನ್ನು ಷೇರ್ ಹಣಕ್ಕೆ ಅವರ ಹೆಸರಿಗೆ ಜಮಾಮಾಡಲಾಗುತ್ತದೆ. ಇದು ಕ್ರಮವಾಗಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಬೈಲಾದಲ್ಲಿ ಹೇಳುವುದಕ್ಕೂ—ರೆಸಲ್ಯೂಷನ್ ಮಾಡಿ ವಸೂಲ್ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ. ಇದು ಬೈಲಾಕ್ಕೆ ಕಾಂಟ್ರರಿ ಆಗುವುದಿಲ್ಲವೇ ?

Sri B. L. GOWDA.—The bye-law says that the Board can take such action as it thinks fit and is in the best interest of the Society. So it is not contrary to the bye-law.

ಶ್ರೀ ಹಂಜಿ ಶಿವಣ್ಣ.—ನಕ್ಕರೆ ಕಂಪೆನಿಗಳಿಗೆ ಲೈಸೆನ್ಸ್ ಕೊಡತಕ್ಕ ಕಾಲದಲ್ಲಿ ಇಂತಿಷ್ಟು ಮೈಲಿಗಳ ದೂರದಲ್ಲಿ ಇರತಕ್ಕ ರೈತರೆಲ್ಲರೂ ಕಾರ್ಖಾನೆಗೆ ಕಬ್ಬನ್ನು ಕೊಡಬೇಕೆಂಬ ನಿರ್ಬಂಧ ಹಾಕಿ ಕೊಡುವುದಕ್ಕಾಗುವುದಿಲ್ಲವೇ ? ಶಿವಮೊಗ್ಗದಲ್ಲಿ ಈಗ 20 ಮೈಲಿ ಫಾನಲೇಲಿ ಇರತಕ್ಕವರ ನಕ್ಕರೆ ಕಂಪೆನಿಗೆ ಕೊಡುವಂತೆ ನಿಗದಿ ಮಾಡಿದ ಇಲ್ಲಿಯೂ ಹಾಗೇ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಮೊದಲು ಅಗ್ರಿಮೆಂಟಿನಲ್ಲಿ ಹೇಗಿದ್ದರೆ ಅವರ ಪ್ರಕಾರ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಗೌರೀಬಿದನೂರು ನಕ್ಕರೆ ಕಾರ್ಖಾನೆಯಲ್ಲಿ ಅದರ ಸ್ವಂತ ಬಂಡವಾಳವೆಷ್ಟು ಮತ್ತು ಸಾಲಮಾಡಿ ಹಾಕಿರತಕ್ಕ ಬಂಡವಾಳವೆಷ್ಟು ?

ಶ್ರೀ ಬಿ. ಎಲ್. ಗೌಡ.—ರೈತರಿಂದ ವಸೂಲ್ಮಾಡಿರತಕ್ಕ ಹಣ 10,70,163 ರೂಪಾಯಿಗಳು, ಸ್ವಂತ ಬಂಡವಾಳ 39, 670,67 ರೂಪಾಯಿಗಳು ಮತ್ತು ಸಾಲ ಎತ್ತಿರತಕ್ಕದ್ದು 2 ಕೋಟಿಗೂ ಮೇಲಿದೆ.

ಶ್ರೀ ಎ. ಮುನಿಯಪ್ಪ.—1958 ರಿಂದ 1969-70 ವರೆಗೂ ರೈತರು ಇದಕ್ಕೆ ಎಷ್ಟು ಕಬ್ಬನ್ನು ಸರಬರಾಯಿ ಮಾಡಿದ್ದಾರೆ ಮತ್ತು ಅವರಿಂದ ಎಷ್ಟು ಹಣ ಕಲೆಕ್ಟಾಗಿದೆ ?

ಶ್ರೀ ಬಿ. ಎಲ್. ಗೌಡ.—ಆ ಸಂಬಂಧವ ಅಂಕೀ ಅಂಶಗಳು ಈಗ ನನ್ನಲ್ಲಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಬರತಕ್ಕ ಆದಾಯವನ್ನು ಲೆಕ್ಕಹಾಕಿದರೆ ಎಷ್ಟು ಪರ್ಸೆಂಟ್ ಲಾಭ ಬಂದಹಾಗೆ ಆಗುತ್ತದೆ ?

ಶ್ರೀ ಬಿ. ಎಲ್. ಗೌಡ.—ಈ ವರ್ಷ ಒಂದು ಸಾವಿರ ಟನ್ನಿಗೂ ಜಾಸ್ತಿ ಕಬ್ಬನ್ನು ಅರೆಯುವಾಗುತ್ತಿದೆ. ಆದ್ದರಿಂದ ಈ ವರ್ಷ ಹೆಚ್ಚು ಲಾಭ ಬರತಕ್ಕ ಭರವಸೆಯಿದೆ.